



















# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ.

www.srimangala.org Email: srimangala.bng@gmail.com

# ವಾರ್ಷಿಕ ವರದಿ 2023–24

ನಂ. 20, 'ಎ' ಸೆಕ್ಟರ್, ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ ನ್ಯೂಟೌನ್, ಬೆಂಗಳೂರು–64

ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

# 2023–24ನೇ ಸಾಲಿನ ಎಸ್.ಎಸ್.ಎಲ್.ಸಿ. ಪ್ರತಿಭಾನ್ವಿತ ವಿದ್ಯಾರ್ಥಿಗಳು


ಧನುಶ್ರೀ


ಪ್ರೀತಿ


ಸಂತೋಷ್ ಕೆ ಆರ್


ಶಶಾಂಕ್ ಜಿ ಮಹೇಂದ್ರಕರ್

**ಪಾಲಕರು, ಶ್ರೀ ಮಂಗಳ ಶಿಕ್ಷಣ ಸಮಿತಿ ಸದಸ್ಯರು, ಶಾಲಾ ಸಮಿತಿ ಸದಸ್ಯರು ಮತ್ತು ಶಿಕ್ಷಕರ ಶ್ರಮಕ್ಕೆ ಅಭಿನಂದನೆಗಳು**


ಜಿಷ್ಣು ದೇಶಪಾಂಡೆ


ರಕ್ಷಾ ಕೆ.


ನಿತಿಲಾಕ್ಷ ಬಿ ಆರ್


ದೀಕ್ಷಿತ ಬಿ

## ನಿಮ್ಮ ಭವಿಷ್ಯ ಉಜ್ವಲವಾಗಿರಲಿ, ಅಭಿನಂದನೆಗಳು

* ಜೀವನದಲ್ಲಿ ಒಳ್ಳೆಯ ಭವಿಷ್ಯ ಉಂಟಾಗಬೇಕಾದರೆ,
ಗೌರವವಾದ ಬಾಳ್ವಿಕೆ ಉಂಟಾಗಬೇಕಾದರೆ,
ಕಾಲವನ್ನು ವ್ಯರ್ಥ ಮಾಡದೆ ಜ್ಞಾನ ಸಂಪಾದನೆ ಮಾಡಬೇಕು.
– ಮಹರ್ಷಿ ಯೋಗಿ ಅರವಿಂದ

# ಅರ್ಪಣೆ



ಸ್ವರ್ಗೀಯ ಅಜಿತ್‌ಕುಮಾರ್
ನಿರ್ದೇಶಕರು, ಹಿಂದೂ ಸೇವಾ ಪ್ರತಿಷ್ಠಾನ
ಪ್ರೇರಕರು, ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

"ನಿಮ್ಮಲ್ಲಿ ಕನಸಿದ್ದರೆ ಅದನ್ನು ನನಸಾಗಿಸುವ ಕಸುವು ನಮ್ಮಲ್ಲಿದೆ"

# ನೆನಪು



ಸ್ವರ್ಗೀಯ ಹೊ. ಭೈರಪ್ಪ
ಸಂಸ್ಥಾಪಕ ಕಾರ್ಯದರ್ಶಿಗಳು,
ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

"ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ"

## ಶ್ರೀ ಮಂಗಳ ಶಿಕ್ಷಣ ಸಮಿತಿಯು 1982-83 ರಲ್ಲಿ ಈ ಕೆಳಕಂಡ ಧ್ಯೇಯೋದ್ದೇಶಗಳೊಂದಿಗೆ ಪ್ರಾರಂಭವಾಯಿತು.

* ಭಾರತೀಯ ಪದ್ಧತಿಯ ಶಿಕ್ಷಣವನ್ನು ಪ್ರಚಾರ ಮಾಡುವುದು ಮತ್ತು ಅನುಷ್ಠಾನಕ್ಕೆ ತರುವುದು.
* ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಅಧ್ಯಾಪಕರ ತರಬೇತಿ ಕೇಂದ್ರಗಳು ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು.
* ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಬೆಳಕಿಗೆ ತರಲು ಅವಶ್ಯಕವಾದ ಶಿಕ್ಷಣವನ್ನು ನೀಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ವಿಚಾರಗಳ ಪ್ರಕಟಣೆಗಳನ್ನು ಹೊರತರುವುದು.
* ಮಕ್ಕಳಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿ ರಾಷ್ಟ್ರದ ಯೋಗ್ಯ ನಾಗರಿಕರನ್ನಾಗಿ ಮಾಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ವಿಷಯಗಳ ಮೇಲೆ ವಿಚಾರ ಸಂಕೀರ್ಣ ಮತ್ತು ಚರ್ಚೆಗಳನ್ನು ನಡೆಸುವುದು.
* ಸಂಸ್ಥೆಯ ಧ್ಯೇಯ ಸಾಧನೆಗೆ ಅವಶ್ಯಕವಾದ ಕಾರ್ಯಕ್ರಮ ರೂಪಿಸಿ ಅದನ್ನು ಕಾರ್ಯಗತ ಮಾಡುವುದು.
* ಸಂಸ್ಥೆಯ ಧ್ಯೇಯಕ್ಕೆ ಅನುಗುಣವಾದ ವಿದ್ಯಾಸಂಸ್ಥೆಗಳನ್ನು ವಹಿಸಿಕೊಟ್ಟಲ್ಲಿ ಅವುಗಳನ್ನು ನಡೆಸುವುದು.

## ಅಧ್ಯಕ್ಷರ ನುಡಿ

ಒಂದು ರಾಷ್ಟ್ರ ನಿರ್ಮಾಣವು ಅಲ್ಲಿನ ಸಾಂಸ್ಕೃತಿಕ, ಸಾಮಾಜಿಕ ಪರಂಪರೆಯನ್ನು ಅವಲಂಬಿಸಿರುತ್ತದೆ. ಅಂತೆಯೇ ಭಾರತವು ಪ್ರಪಂಚದ ಪುರಾತನವಾದ, ಸರ್ವಶ್ರೇಷ್ಠವಾದ ಸನಾತನ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ದೇಶ. ನಮ್ಮ ದೇಶದ ಭವ್ಯ ಪರಂಪರೆಗೆ ಮೂಲ ಆಧಾರವೇ ನಮ್ಮ ದೇಶದ ಆಧ್ಯಾತ್ಮಿಕತೆ. ಅಂದರೆ ಉನ್ನತವಾದ ಜೀವನ ಪದ್ಧತಿ, ಆಚಾರ-ವಿಚಾರ, ಧಾರ್ಮಿಕ ನಂಬಿಕೆಗಳು, ಸಾಮಾಜಿಕ ಮೌಲ್ಯಗಳು ಇವೆಲ್ಲವುಗಳನ್ನು ಅಳವಡಿಸಿಕೊಂಡು ನಾವು ಸಶಕ್ತ ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗೋಣ.

ಹಾಗೆಯೇ ದೇಶದ ಶ್ರೇಷ್ಠ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು, ಸಂಸ್ಕಾರವಂತ ಪ್ರಜೆಗಳಾಗಿ ವಿದ್ಯೆ ಮತ್ತು ವಿನಯದಿಂದ ಸಮಾಜದ ಉತ್ತಮ ನಾಗರಿಕರಾಗಿ ಜೀವಿಸೋಣ. ನಮ್ಮ ಪ್ರಾಚೀನ ಶಿಕ್ಷಣದ ಕೇಂದ್ರವಾದ ಗುರುಕುಲದಲ್ಲಿರುವಂತೆ ಭಾರತೀಯ ಶಿಕ್ಷಣದ ಜೊತೆಗೆ ಆಧುನಿಕ ಶಿಕ್ಷಣವನ್ನೂ ಪಡೆದು ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಾಧನೆಯಾಗಲಿ. ಕವಿ ಡಿ.ವಿ.ಜಿ.ಯವರ "ಹಳೆ ಬೇರು ಹೊಸ ಚಿಗುರು ಸೇರಿದರೆ ಮರ ಸೊಗಸು" ಎನ್ನುವ ಮಾತಿನಂತೆ ನಮ್ಮ ಯುವ ಸಮೂಹ ಹಿರಿಯರ ಮಾರ್ಗದರ್ಶನ ಪಡೆದು ಶೈಕ್ಷಣಿಕವಾಗಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ.

**ಶ್ರೀ ನಾಗರಾಜ ಗುಪ್ತ ಎಸ್.**
**ಅಧ್ಯಕ್ಷರು, ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)**

ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

## ಶ್ರೀ ಮಂಗಳ ಶಿಕ್ಷಣ ಸಮಿತಿಯ ಸಮೂಹ ಸಂಸ್ಥೆಗಳು

**ಮಾಗಡಿ**

ಮೊ: 8029554185

ಶ್ರೀ ಸರಸ್ವತಿ ವಿದ್ಯಾಮಂದಿರ (ಪ್ರಾರಂಭ: 1982)
ಅನುದಾನಿತ ಕನ್ನಡ ಹಿ.ಪ್ರಾ. ಮತ್ತು ಪ್ರೌಢಶಾಲೆ



ಮಂಗಳ ವಿದ್ಯಾಕೇಂದ್ರ (ಪ್ರಾರಂಭ: 2017)
ಆಂಗ್ಲ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ
www.mvkmg.com



**ತ್ಯಾಮಗೊಂಡ್ಲು**

ಮೊ: 9738305523

ಶ್ರೀ ವೀಣಾ ಮಕ್ಕಳ ಮಂದಿರ (ಪ್ರಾರಂಭ: 1983)
ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ

**ದೊಡ್ಡಬಳ್ಳಾಪುರ**

ಮೊ: 9739229328

ಶ್ರೀ ಮಂಗಳ ವಿದ್ಯಾ ಮಂದಿರ (ಪ್ರಾರಂಭ: 1983)
ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ





**ಹೊಸಕೋಟೆ**

ಮೊ: 9108047277
ಮೊ: 6360625939

ಶ್ರೀ ಗಾಯತ್ರಿ ವಿದ್ಯಾ ಮಂದಿರ (ಪ್ರಾರಂಭ: 1983)
ಹಿರಿಯ ಪ್ರಾಥಮಿಕ ಶಾಲೆ

ಶ್ರೀ ವಿವೇಕಾನಂದ ಪಿ.ಯು. ಕಾಲೇಜು (ಪ್ರಾರಂಭ: 2023)
www.svpuc.org



**ವರ್ತೂರು**

ಮೊ: 9108047278

ಶ್ರೀ ಶಾರದಾ ವಿದ್ಯಾ ಮಂದಿರ (ಪ್ರಾರಂಭ: 1982)
ಆಂಗ್ಲ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ
www.ssvmvarthur.com



**ಕನಕಪುರ**

ಮೊ: 8088799355

ಮಂಗಳ ವಿದ್ಯಾ ಮಂದಿರ (ಪ್ರಾರಂಭ: 1986)
ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ
www.mvmkp.com



**ಯಲಹಂಕ**

ಮೊ: 9008318164

ಮಂಗಳ ವಿದ್ಯಾ ಮಂದಿರ (ಪ್ರಾರಂಭ: 1986)
ಆಂಗ್ಲ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ
www.mangalavidyamandira.org



**ಅತ್ತಿಬೆಲೆ**

ಮೊ: 9141218164

ಶ್ರೀ ಭಾರತಿ ವಿದ್ಯಾನಿಕೇತನ (ಪ್ರಾರಂಭ: 1984)
ಪೂರ್ವ ಪ್ರಾಥಮಿಕ ಶಾಲೆ



## ಶ್ರೀ ಮಂಗಳ ಶಿಕ್ಷಣ ಸಮಿತಿಯ ಸಹಯೋಗದೊಂದಿಗೆ ನಡೆಯುತ್ತಿರುವ ಶಾಲೆಗಳು

* ಜ್ಞಾನವಾಹಿನಿ ವಿದ್ಯಾಕೇಂದ್ರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ನೆಲಮಂಗಲ
* ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ಹೊಸಕೋಟೆ
* ಹೆಂಕ್ ಬ್ರೂನ ಸ್ವಾಮಿ ವಿವೇಕಾನಂದ ರೌಂಡ್ ಟೇಬಲ್ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ದೊಡ್ಡಗಟ್ಟಿಗನಬ್ಬೆ
* ಸೆಂಟ್‌ಪಾಲ್ ಕಾನ್ವೆಂಟ್ ಹಿರಿಯ ಪ್ರಾಥಮಿಕ ಶಾಲೆ, ಕೆ.ಪಿ. ಅಗ್ರಹಾರ, ಬೆಂಗಳೂರು

ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

# ಪ್ರತಿಭಾ ಪುರಸ್ಕಾರ 2023


















**ದಿನಾಂಕ** 20-07-2023

**ಸ್ಥಳ** ಐ.ಇ.ಟಿ.ಇ. ಕಟ್ಟಡ, ಗಂಗಾನಗರ, ಬೆಂಗಳೂರು

**ಅಧ್ಯಕ್ಷತೆ** ಶ್ರೀ ಉಮೇಶ್,
ಪ್ರಾಂತ ಕಾರ್ಯದರ್ಶಿ,
ವಿದ್ಯಾಭಾರತಿ-ಕರ್ನಾಟಕ

**ಮುಖ್ಯ ಅತಿಥಿ**

ಶ್ರೀ ಪ್ರೊ. ಕೆ. ವೇಣುಗೋಪಾಲ್
ನಿವೃತ್ತ ಉಪಕುಲಪತಿಗಳು,
ಬೆಂಗಳೂರು ವಿಶ್ವವಿದ್ಯಾಲಯ

**ಸಾರಾಂಶ**

* 150ಕ್ಕೂ ಹೆಚ್ಚು ಶಿಕ್ಷಕರು ಉಪಸ್ಥಿತರಿದ್ದರು.
* 100ಕ್ಕೂ ಹೆಚ್ಚು ಪೋಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.
* ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕ ಪಡೆದ 12ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

**ಸಂಪನ್ಮೂಲ ವ್ಯಕ್ತಿಗಳು**

ಶ್ರೀ ಗುಂಡೂರಾವ್
ಶ್ರೀ ಗೋಪಾಲಕೃಷ್ಣ
ಶ್ರೀಮತಿ ಡಾ. ಸೌಮ್ಯ





# ಜಿಲ್ಲಾ ಮಟ್ಟದ ಕ್ರೀಡಾಕೂಟ–2023






**ದಿನಾಂಕ** 28, 29 ಜುಲೈ 2023

**ಸ್ಥಳ** ಶ್ರೀ ಸರಸ್ವತಿ ವಿದ್ಯಾಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಶಾಲಾ ಆಟದ ಮೈದಾನ, ಮಾಗಡಿ

**ಸಾರಾಂಶ**

* 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ ಕ್ರೀಡಾಕೂಟ
* 10ಕ್ಕೂ ಹೆಚ್ಚು ಮಂಗಳ ಶಿಕ್ಷಣ ಶಾಲೆಗಳು ಭಾಗವಹಿಸಿದ್ದವು
* 450ಕ್ಕೂ ಹೆಚ್ಚು ವಿದ್ಯಾರ್ಥಿಗಳ ಕ್ರೀಡಾಕೂಟೋತ್ಸವ
* 100ಕ್ಕೂ ಹೆಚ್ಚು ಶಿಕ್ಷಕರ ಬೆಂಬಲ
* 20ಕ್ಕೂ ಹೆಚ್ಚು ಕ್ರೀಡೆಗಳು
* 100ಕ್ಕೂ ಹೆಚ್ಚು ಪ್ರಶಸ್ತಿಗಳು
* ಚದುರಂಗ ಮತ್ತು ಲಗೋರಿ ದೇಶೀ ಆಟಗಳನ್ನು ಮೊದಲ ಬಾರಿಗೆ ಏರ್ಪಡಿಸಲಾಗಿತ್ತು
* ಮೊದಲ ಬಾರಿಗೆ ಪುರುಷ ಶಿಕ್ಷಕರ ಓಟದ ಸ್ಪರ್ಧೆ ಏರ್ಪಡಿಸಲಾಗಿತ್ತು






















# ಜಿಲ್ಲಾ ಘೋಷ್ ವರ್ಗ





**ದಿನಾಂಕ** 20–07–2023

**ಸ್ಥಳ** ಮಂಗಳ ವಿದ್ಯಾ ಕೇಂದ್ರ ಯಲಹಂಕ

* ನಾಲ್ಕು ದಿನದ ವಸತಿ ಶಿಬಿರ
* 90ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿ
* 20ಕ್ಕೂ ಹೆಚ್ಚು ಶಿಕ್ಷಕರ ಬೆಂಬಲ
* 05ಕ್ಕೂ ಹೆಚ್ಚು ವಾದನಗಳ ಕಲಿಕಾ ತರಬೇತಿ
* 15 ಗಂಟೆಗಳಿಗೂ ಅಧಿಕ ಬೌದ್ಧಿಕ್ ಮತ್ತು ಶಾರೀರಿಕ ಅವಧಿ
* 30ಕ್ಕೂ ಹೆಚ್ಚು ಯಲಹಂಕ ಶಾಲೆಯ ಪೋಷಕರು ಮಾತ್ರ ಭೋಜನದಲ್ಲಿ ಭಾಗವಹಿಸಿ ಶಿಬಿರದ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಉಣಬಡಿಸಿದರು.
* 05ಕ್ಕೂ ಹೆಚ್ಚು ಬೌದ್ಧಿಕ್ ಅವಧಿ












# ರಾಜ್ಯಮಟ್ಟದ ಸ್ಕೂಲ್ ಬ್ಯಾಂಡ್ ಸ್ಪರ್ಧಾಕೂಟ–2024







**ದಿನಾಂಕ** 12–01–2024

**ಸ್ಥಳ** ರಾಮಕೃಷ್ಣ ವಿದ್ಯಾಶಾಲೆ ಮೈಸೂರು

* ಕ್ರೀಡಾಭಾರತಿ ಕರ್ನಾಟಕದ ವತಿಯಿಂದ ರಾಜ್ಯಮಟ್ಟದ ಸ್ಕೂಲ್ ಬ್ಯಾಂಡ್ ಸ್ಪರ್ಧಾಕೂಟವನ್ನು ಆಯೋಜಿಸಲಾಗಿತ್ತು
* ರಾಜ್ಯದ ವಿವಿಧ ಪ್ರತಿಷ್ಠಿತ ಶಾಲಾ ತಂಡಗಳು ಭಾಗವಹಿಸಿದ್ದವು
* ಮಂಗಳ ಶಿಕ್ಷಣ ಸಮಿತಿಯ ಮಂಗಳ ವಿದ್ಯಾಮಂದಿರ ಯಲಹಂಕ ಶಾಲೆ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿದರು
* ಮಂಗಳ ವಿದ್ಯಾಮಂದಿರ ಕನಕಪುರ ಶಾಲೆ 10ನೇ ಸ್ಥಾನವನ್ನು ಗಳಿಸಿದರು

## ರಾಜ್ಯಮಟ್ಟದ ಘೋಷ್ ವರ್ಗ, ಶಿವಮೊಗ್ಗ



# ನುಡಿ ನಮನ

ದಿನಾಂಕ 17–12–2023ರಂದು, ಶ್ರೀ ಮಂಗಳ ಶಿಕ್ಷಣ ಸಮಿತಿಯ ಸಂಸ್ಥಾಪಕ ಕಾರ್ಯದರ್ಶಿಗಳು, ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಸ್ವರ್ಗೀಯ ಶ್ರೀ ಹೊ. ಭೈರಪ್ಪನವರ ಪುಣ್ಯಸ್ಮರಣೆ. "ನುಡಿನಮನ" ಕಾರ್ಯಕ್ರಮವನ್ನು ಉತ್ತುಂಗ ರಂಗರಾವ್ ರಸ್ತೆ, ಶಂಕರಪುರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಶ್ರೀ ದು.ಗು.ಲಕ್ಷ್ಮಣ್‌ರವರು ನಿಕಟಪೂರ್ವ ಸಂಪಾದಕರು ವಿಕ್ರಮ ವಾರ ಪತ್ರಿಕೆ ಇವರು ಶ್ರೀ ಹೊ. ಭೈರಪ್ಪನವರ ಸಮಾಜಮುಖಿ ಸಾರ್ಥಕ ಬದುಕನ್ನು ಸ್ಮರಿಸಿದರು.






# ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ





**ದಿನಾಂಕ** 29–11–2023

**ಸ್ಥಳ** ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು

* 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು
* 13ಕ್ಕೂ ಹೆಚ್ಚಿನ ಶಾಲೆಗಳು ಭಾಗವಹಿಸಿದ್ದವು
* 36ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.
* **ಕ್ವಿಜ್ ಮಾಸ್ಟರ್ ಶ್ರೀ ವಿಜಯ್ ಮತ್ತು ತಂಡ, ಸ್ಫೂರ್ತಿ ಇನ್‌ಸ್ಟಿಟ್ಯೂಟ್‌ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.**
* ಭಾರತೀಯ ಸಂಸ್ಕೃತಿ, ಪ್ರಚಲಿತ ವಿದ್ಯಮಾನಗಳು, ರಾಮಾಯಣ, ಮಹಾಭಾರತ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಲಾಯಿತು











## ಸರ್ವ ಸದಸ್ಯರ ಸಭೆ

ದಿನಾಂಕ 15-10-2023ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಎಸ್. ನಾಗರಾಜ ಗುಪ್ತರವರ ಅಧ್ಯಕ್ಷತೆಯಲ್ಲಿ "ನೆನಪು" ಅಲುಮ್ನಿ ಬ್ಲಾಕ್ ಎಂ.ಎಸ್.ಆರ್.ಐ.ಟಿ. ಬೆಂಗಳೂರು ಇಲ್ಲಿ ನಡೆಸಲಾಯಿತು.



## ಅಕೌಂಟೆಂಟ್ ಸಭೆ 2023

ದಿನಾಂಕ 07-12-2023ರಂದು ಯಲಹಂಕದ ಮಂಗಳ ವಿದ್ಯಾ ಮಂದಿರ ಶಾಲೆಯಲ್ಲಿ ಲೆಕ್ಕಪರಿಶೋಧಕ ಸಭೆಯನ್ನು ಆಯೋಜಿಸಲಾಗಿತ್ತು. ಎಲ್ಲಾ ಶಾಲೆಗಳ ಖಜಾಂಚಿಗಳು ಹಾಗೂ ಲೆಕ್ಕಿಗರು ಉಪಸ್ಥಿತರಿದ್ದರು. ಲೆಕ್ಕಪರಿಶೋಧಕರಾದ ಶ್ರೀ ರಾಘವೇಂದ್ರ ಪುರಾಣಿಕ್‌ರವರು ಎಲ್ಲಾ ಶಾಲೆಗಳು ನಿರ್ವಹಿಸುವ ಖಾತೆಗಳ ವಿವರಗಳನ್ನು ನೀಡಿರುತ್ತಾರೆ.



# ರಾಷ್ಟ್ರಮಟ್ಟದ ರಾಮಾಯಣ ಸ್ಪರ್ಧೆ








* ರಾಷ್ಟ್ರಮಟ್ಟದ ಆನ್‌ಲೈನ್ ಮತ್ತು ಆಫ್‌ಲೈನ್ ಸ್ಪರ್ಧೆಗಳು
* 1 ರಿಂದ 9ನೇ ತರಗತಿಗಳವರೆಗೆ 2 ಹಂತಗಳಲ್ಲಿ ಸ್ಪರ್ಧೆ ನಡೆಸಲಾಯಿತು
* ಗಾಯತ್ರಿ ರಾಮಾಯಣ ಪಠಣ, ಆದಿತ್ಯ ಹೃದಯಂ ಪಾರಾಯಣ, ರಾಮಾಯಣದ ಕಥೆಗಳು, ಶ್ರೀರಾಮನ ಹಾಡುಗಳು, ಶ್ಲೋಕ, ಶ್ರೀರಾಮನ ಚಿತ್ರ ಬಿಡಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು
* 05ಕ್ಕೂ ಹೆಚ್ಚು ರಾಜ್ಯಗಳಿಂದ 10ಕ್ಕೂ ಹೆಚ್ಚು ಕರ್ನಾಟಕದ ಜಿಲ್ಲೆಗಳಿಂದ 85ಕ್ಕೂ ಹೆಚ್ಚು ಶಾಲೆಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು
* 10ಕ್ಕೂ ಹೆಚ್ಚು ತೀರ್ಪುಗಾರರು ಸ್ಪರ್ಧೆಗಳನ್ನು ನಡೆಸಿಕೊಟ್ಟರು
* 20ಕ್ಕೂ ಹೆಚ್ಚು ಸಿಬ್ಬಂದಿ ವರ್ಗದವರು ನಿರಂತರ 03 ತಿಂಗಳ ಕಾಲ ಶ್ರಮಿಸಿ 20ಕ್ಕೂ ಹೆಚ್ಚು ಹಂತಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಯಿತು
* ದಿನಾಂಕ 19-01-2024 ರಂದು ಮಂಗಳ ವಿದ್ಯಾ ಮಂದಿರ ಯಲಹಂಕ ಶಾಲೆಯಲ್ಲಿ ಸ್ಪರ್ಧಾ ವಿಜೇತರಿಗೆ ನಗದು ಸಹಿತ ಬಹುಮಾನ ನೀಡಲಾಯಿತು

ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)

# ಮೌಲ್ಯಾಂಕನ ಪರೀಕ್ಷೆ



**ದಿನಾಂಕ** 02–03–2024

* ಶ್ರೀ ಮಂಗಳ ಶಿಕ್ಷಣ ಸಮಿತಿ ಶಾಲೆಗಳ 7 ಮತ್ತು 9ನೇ ತರಗತಿ ಮಕ್ಕಳಿಗೆ ಶೈಕ್ಷಣಿಕ ಗುಣಮಟ್ಟವನ್ನು ಪರಿಶೀಲಿಸುವ ಉದ್ದೇಶದಿಂದ ಮೌಲ್ಯಾಂಕನ ಪರೀಕ್ಷೆಯನ್ನು ಆಯೋಜಿಸಲಾಗಿತ್ತು
* ಎಂ.ಎಸ್.ಆರ್.ಐ.ಟಿ. ಕಾಲೇಜಿನ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷಾ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ
* ಪರೀಕ್ಷೆಗೆ 11 ಶಾಲೆಗಳಿಂದ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು

















# ಜಿಲ್ಲಾ ಮಟ್ಟದ ಸಹಪಠ್ಯ ಚಟುವಟಿಕಾ ಸ್ಪರ್ಧೆ





**ದಿನಾಂಕ** 12–01–2024

**ಸ್ಥಳ** ಶ್ರೀ ಮಂಗಳ ವಿದ್ಯಾ ಮಂದಿರ,
ದೊಡ್ಡಬಳ್ಳಾಪುರ

**ಉದ್ಘಾಟನೆ**

ಶ್ರೀಮತಿ ದಾಕ್ಷಾಯಿಣಿ ಹೆಚ್ ಎಸ್,
ಸಹಾಯಕ ನಿರ್ದೇಶಕರು, ಅಕ್ಷರ
ದಾಸೋಹ ಯೋಜನೆ, ಡಿ.ಬಿ.ಪುರ

**ಅಧ್ಯಕ್ಷತೆ** ಶ್ರೀ ಕೆ ಚನ್ನಪ್ಪ

ಸಹ ಸಂಚಾಲಕರು ಸ್ಥಾನೀಯ ಸಮಿತಿ,
ಶ್ರೀ ಮಂಗಳ ವಿದ್ಯಾಮಂದಿರ, ಡಿ.ಬಿ.ಪುರ

**ಮುಖ್ಯ ಅತಿಥಿಗಳು**

ಶ್ರೀ ಕೆ ಪಿ ಗಗನ್ ವಾಣಿಜ್ಯೋದ್ಯಮಿಗಳು
ದೊಡ್ಡಬಳ್ಳಾಪುರ

ಶ್ರೀ ಶ್ರೀದರ್ಶನ್ ಕೆ
ಸದಸ್ಯರು, ಶ್ರೀ ಮಂಗಳ ಶಿಕ್ಷಣ ಸಮಿತಿ









# ಶಾಲಾ ವಾರ್ಷಿಕೋತ್ಸವ ಸಮಾರಂಭದ ಭಾವಚಿತ್ರಗಳು

## ಶ್ರೀ ಸರಸ್ವತಿ ವಿದ್ಯಾ ಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಮಾಗಡಿ





# ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು






# ಶ್ರೀ ಮಂಗಳ ವಿದ್ಯಾ ಮಂದಿರ, ದೊಡ್ಡಬಳ್ಳಾಪುರ






# ಮಂಗಳ ವಿದ್ಯಾ ಮಂದಿರ, ಯಲಹಂಕ






# ಶ್ರೀ ಶಾರದ ವಿದ್ಯಾ ಮಂದಿರ, ವರ್ತೂರು






# ಮಂಗಳ ವಿದ್ಯಾ ಮಂದಿರ, ಕನಕಪುರ






# ಶ್ರೀ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ




